# ಎಚ್ಚರದಲಿ ನಡೆ ಮನವೆ

1. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchhu Rayaru.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao
3. **Note:** The lyrics given without highlights are as per Ref. 2. But the lyrics are different in Ref. 1 above. They are given separately in green highlights.
4. **Note:** Singer has followed lyrics as in Ref. 2.

ರಾಗ ಆನಂದಭೈರವಿ. ಅಟ ತಾಳ

ಎಚ್ಚರದಲಿ ನಡೆ ಮನವೆ ನಡೆ ಮನವೆ || ಪ ||

ಮುದ್ದು ಅಚ್ಯುತನ ದಾಸರ ಒಡಗೂಡಿ ಬರುವೆ || ಅಪ ||

ಅನ್ನ ದಾನವ ಮಾಡುವುದಿಲ್ಲಿ ಮೃ-
ಷ್ಟಾನ್ನವ ತಂದು ಮುಂದಿಡುವರು ಅಲ್ಲಿ
ಅನ್ಯಾಯ ಮಾಡುವುದಿಲ್ಲಿ ನಿನ್ನ
ಬೆನ್ನ ಚರ್ಮವ ಸೀಳಿ ತಿನಿಸುವರಲ್ಲಿ || ೧ ||

ತಂದೆ ತಾಯ್ಗಳ ಪೂಜಿಪುದಿಲ್ಲಿ ದೇ-
ವೇಂದ್ರನ ಸಭೆಯ ತೋರುವರಲ್ಲಿ
ತಂದೆ ತಾಯಿಗಳ ಬಯ್ವುದಿಲ್ಲಿ ಹಲ್ಲು
ದೊಂದೆಯ ಕಟ್ಟಿ ಸುಡಿಸುವರೊ ಅಲ್ಲಿ || ೨ ||

ಆಲಯ ದಾನವು ಇಲ್ಲಿ, ವಿ-
ಶಾಲ ವೈಕುಂಠದೊಳಿಡುವರೊ ಅಲ್ಲಿ
ಆಲಯ ಮುರಿಯುವುದಿಲ್ಲಿ, ನಿನ್ನ
ಶೂಲದ ಮರವನೇರಿಸಿ ಕೊಲ್ವರಲ್ಲಿ || ೩ ||

ಅತ್ತೆ ಮಾವನ ಸೇವೆ ಇಲ್ಲಿ, ಮತ್ತೆ

ಉತ್ತಮ ಪತಿವ್ರತೆಯೆಂಬುವರಲ್ಲಿ
ಅತ್ತೆ ಮಾವನ ಬಯ್ವುದಿಲ್ಲಿ, ನಿನ್ನ
ಕತ್ತು ಗರಗಸದಲ್ಲಿ ಕೊಯ್ಯುವರಲ್ಲಿ || ೪ ||

ಗಂಡನ ಭಕ್ತಿಯು ಇಲ್ಲಿ, ನಮ್ಮ
ಪುಂಡರೀಕಾಕ್ಷನು ಒಲಿಯುವನಲ್ಲಿ
ಗಂಡನ ನಿಂದಿಪುದಿಲ್ಲಿ, ನಿನ್ನ
ಖಂಡ ಖಂಡವ ಕತ್ತರಿಸುವರಲ್ಲಿ || ೫ ||

ಮದ್ದಿಟ್ಟು ಕೊಲ್ಲುವುದಿಲ್ಲಿ, ಒ-
ದ್ದೊದ್ದು ಹದ್ದು ಕಾಗೆಗೆ ಹಾಕುವರಲ್ಲಿ
ಕ್ಷುದ್ರ ಬುದ್ಧಿಯ ಮಾಡೋದಿಲ್ಲಿ ದೊಡ್ಡ
ಗುದ್ದಲಿ ಕಾಸಿ ಬೆನ್ನೊಳು ಎಳೆವರಲ್ಲಿ || ೬ ||

ಯಾಚಕರ ಮನ್ನಿಪುದಿಲ್ಲಿ ನಿನ್ನ
ಯೋಚನೆಯಿಲ್ಲದೆ ಸಲಹುವರಲ್ಲಿ
ಯಾಚಕರನು ಬಯ್ವುದಿಲ್ಲಿ ನಿನ್ನ
ನಾಚಿಕೆ ತೆಗೆದು ನಾಲಗೆ ಸೀಳ್ವರಲ್ಲಿ || ೭ ||

ಧರ್ಮವ ಮಾಡುವುದಿಲ್ಲಿ ಸು-
ಧರ್ಮ ಸಭೆಯ ತೋರುವರು ಮುಂದಲ್ಲಿ
ಕರ್ಮ ಯೋಚನೆಗಳು ಇಲ್ಲಿ, ನಿನಗೆ
ನಿರ್ಮಿಸಿಹನು ಕ್ರಿಮಿ ತಿನ್ನುವುದಲ್ಲಿ || ೮ ||

ಹೆಣ್ಣು ಹೊನ್ನನು ಬಯಸೋದಿಲ್ಲಿ ನಿನ್ನ
ಕಣ್ಣಿಗೆ ಸುಣ್ಣವ ತುಂಬುವರಲ್ಲಿ
ಘನ ಸುಜ್ಞಾನವು ಇಲ್ಲಿ ಪ್ರ-
ಸನ್ನ ಪುರಂದರ ವಿಠಲ ಪಾಲಿಪನಲ್ಲಿ || ೯ ||

**Note:** The lyrics in Ref. 1 above are different from the above, they are given below separately in green highlights. This has 11 stanzas.

ರಾಗ ಆನಂದಭೈರವಿ.                        ಅಟ ತಾಳ

ಎಚ್ಚರದಲಿ ನಡೆ ಮನವೆ ನಡೆ ಮನವೆ     || ಪ ||

ಮುದ್ದು ಅಚ್ಯುತನ ದಾಸರ ಒಡಗೂಡಿ ಬರುವೆ     || ಅಪ ||

ಧರ್ಮವ ಮಾಡುವುದಿಲ್ಲಿ ಇನ್ನು
ಬ್ರಹ್ಮನ ಸಭೆಯ ತೋರುವರು ಮುಂದಲ್ಲಿ
ಕರ್ಮ ಯೋಚನೆಗಳು ಇಲ್ಲಿ, ಬೆನ್ನ
ಚರ್ಮವ ಸುಲಿಸಿ ತಿನ್ನಿಸುವರು ಅಲ್ಲಿ     || ೧ ||

ಅನ್ನ ದಾನವ ಮಾಳ್ಪುದಿಲ್ಲಿ ಮೃ-
ಷ್ಟಾನ್ನವ ತಂದು ಮುಂದಿಡುವರು ಅಲ್ಲಿ
ಅನ್ಯಾಯ ನುಡಿಯುವುದಿಲ್ಲಿ ಛಿನ್ನ
ಭಿನ್ನವ ಮಾಡಿ ತಿನ್ನಿಸುವರು ಅಲ್ಲಿ     || ೨ ||

ಮೋಸವ ಮಾಡುವುದಿಲ್ಲಿ ಸೀಸ -
ಕಾಸಿ ಬಾಯೊಳಗೆ ಹೊಯ್ಯುವರಲ್ಲಿ
ದಾಸರ ಪೂಜಿಪುದಿಲ್ಲಿ ಉ-
ರ್ವೀಶಾಧಿಪತಿ ಬಂದನೆಂಬರು ಅಲ್ಲಿ     || ೩ ||

ವಂಚನೆ ಮಾಡುವುದಿಲ್ಲಿ, ಕಾದ
ಹಂಚಿನ ಪುಡಿಯ ತಿನ್ನಿಸುವರು ಅಲ್ಲಿ
ಪಂಚಾಮೃತದ ಪೂಜೆ ಇಲ್ಲಿ ನಿನಗೆ
ಕಂಚು ಕಾಳಾಂಜಿಯ ಪಿಡಿದಿಹರಿಲ್ಲಿ     || ೪ ||

ಚಾಡಿಯ ನುಡಿವುದು ಇಲ್ಲಿ ಅದ -
ನಾಡಿದ ನಾಲಿಗೆ ಸೀಳುವರಲ್ಲಿ
ಬೇಡ ಬಂದರೆ ಬಯ್ವುದಿಲ್ಲಿ ನಿನ್ನ
ಓಡಾಡುವ ಕಾಲು ಕತ್ತರಿಪರಲ್ಲಿ     || ೫ ||

ಮದ್ದಿಕ್ಕಿ ಕೊಲ್ಲುವುದಿಲ್ಲಿ, ಒದ್ದು

ಹದ್ದು ಕಾಗೆಗಳಿಗೆ ಈಯುವರಲ್ಲಿ
ಕ್ಷುದ್ರ ಬುದ್ಧಿಯ ನಡೆಪುದಿಲ್ಲಿ, ದೊಡ್ಡ
ಗುದ್ದಲಿ ಬೆನ್ನೊಳು ಎಳೆಯುವರಲ್ಲಿ ॥ ೬ ॥

ಕೊಟ್ಟ ಭಾಷೆಗೆ ತಪ್ಪುವುದಿಲ್ಲಿ ಕೈಯ
ಕಟ್ಟಿ ಈಟಿಯಿಂದ ಇರಿಯುವರಲ್ಲಿ
ಕೊಟ್ಟ ಧರ್ಮವ ನಡೆಸುವುದಿಲ್ಲಿ ಬಲು
ಶ್ರೇಷ್ಠ ನೀನೆಂದು ಕೊಂಡಾಡುವರಲ್ಲಿ ॥ ೭ ॥

ಆಲಯ ದಾನವು ಇಲ್ಲಿ, ವಿ-
ಶಾಲ ವೈಕುಂಠದ ಮಂದಿರವಲ್ಲಿ
ಆಲಯ ಮುರಿಯುವುದಿಲ್ಲಿ, ನಿನ್ನ
ಶೂಲದ ಮೇಲೇರಿಸಿ ಕೊಲುವರಲ್ಲಿ ॥ ೮ ॥

ತಂದೆ ಮಾತನು ಮೀರುವುದಿಲ್ಲಿ, ಹಲ್ಲು
ದೊಂದೆಯ ಕಟ್ಟಿ ಸುಡಿಸುವರಲ್ಲಿ
ತಂದೆ ತಾಯ್ಗಳ ಪೂಜೆ ಇಲ್ಲಿ ದೇ-
ವೇಂದ್ರನ ಸಭೆಯ ತೋರುವರು ಮುಂದಲ್ಲಿ ॥ ೯ ॥

ಗಂಡನ ಬಯ್ಯುವುದಿಲ್ಲಿ, ಬೆಂಕೆ -
ಕೆಂಡವ ತಂದು ಬಾಯಲಿ ತುಂಬುವರಲ್ಲಿ
ಕೊಂಡೆಯ ನಡೆಸುವುದಿಲ್ಲಿ ಬೆಂಕೆ -
ಕುಂಡವ ತಂದು ತಲೆಯಲಿಡುವರಲ್ಲಿ ॥ ೧೦ ॥

ಹೊನ್ನು ಹೆಣ್ಣನು ಬಯಸುವುದಿಲ್ಲಿ, ನಿನ್ನ
ಕಣ್ಣಿಗೆ ಸುಣ್ಣವ ತುಂಬುವರಲ್ಲಿ
ಕನ್ಯಾ ದಾನವ ಮಾಳ್ಪುದಿಲ್ಲಿ, ನಮ್ಮ
ಚೆನ್ನ ಪುರಂದರ ವಿಠಲನೊಲಿವನು ಅಲ್ಲಿ ॥ ೧೧ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ವ್ಯಕ್ತಿ, ಲೋಕದಲ್ಲಿ ನಡೆದುಕೊಳ್ಳುವ ರೀತಿಗೆ ಅನುಗುಣವಾಗಿ ಸ್ವರ್ಗಸುಖ, ನರಕಯಾತನೆಗಳು ಸಿದ್ಧಗೊಳ್ಳುತ್ತವೆಂಬುದನ್ನು ವಿವರವಾಗಿ ಇಲ್ಲಿ ಚಿತ್ರಿಸಲಾಗಿದೆ. ಪುರಂದರ ದಾಸರು ಪ್ರತಿಪಾದಿಸುವ ಲೋಕಶೀಲಗಳೆಂದರೆ ಅನ್ನ ದಾನ, ಗೃಹ ದಾನ, ಧನ ದಾನ, ಧರ್ಮ ಕಾರ್ಯಾಚರಣೆ, ಗುರುಹಿರಿಯರಲ್ಲಿ ಭಕ್ತಿ ಇಡುವಿಕೆ. ಇವೆಲ್ಲ ಸ್ವರ್ಗ ಸಂಪತ್ತನ್ನು ತಂದುಕೊಡುವಂಥವು. ಇದಕ್ಕೆ ವಿರುದ್ಧವಾಗಿ ಮನೆಮುರುಕಬುದ್ಧಿ, ಗುರುಹಿರಿಯರ ನಿಂದನೆ, ವಿಷಪ್ರಾಶನ, ಅನ್ಯಸ್ತ್ರೀ ಮತ್ತು ಅನ್ಯರ ವಿತ್ತ ಹರಣ, ಅನ್ಯಾಯ ಕಾರ್ಯಾಚರಣೆ, ಕ್ಷುದ್ರ ಬುದ್ಧಿ ಮೊದಲಾದುವುಗಳಿಗೆ ಪ್ರತಿಯಾಗಿ ಘೋರ ನರಕದ ಉಗ್ರ ಚಿತ್ರಗಳನ್ನು ಕಾಣಿಸಿದ್ದಾರೆ. ದಾಸರ ಶೀಲಸಂವರ್ಧನೆಯ ಕಾಳಜಿ ಇಲ್ಲಿ ಕಾಣುತ್ತದೆ.

ದುರಾಚಾರದ ಮನಸ್ಸಿಗೆ ಒಂದೊಂದು ಪಾಪಕ್ಕೂ ನರಕದಲ್ಲಿ ಎಂತೆಂತಹ ಪ್ರಾಯಶ್ಚಿತ್ತವನ್ನು ಅನುಭವಿಸಬೇಕಾಗುವುದೆಂಬುದನ್ನು ದಾಸರು ಈ ಹಾಡಿನಲ್ಲಿ ವಿವರಿಸಿದ್ದಾರೆ.

**ದೊಂದೆ** – ಕಂತೆ, ಕಟ್ಟು.

**ಕರ್ಮಾ ಮೋಚನ** = ಮಾಡಬೇಕಾದ ಆಚಾರಗಳನ್ನು ಬಿಡುವುದು.

**ಕಂಚು** = ಕನ್ನಡಿ

**ಕಾಳಂಜಿ** = ಉಗುಳ್ಳಾಟ್ಟೆ, ಪೀಕ್ ದಾನಿ

**ಕೊಂಡೆ** = ಚಾಡಿ

**Classification:** Keerthane
**Ankita:** purandara vittala
**Location:** NA
**Category:** Jeevana Sutra, Garuda Purana Vichara
**Sub-Category:** achyuta, anna, dana, vaikunta, tande, tayi, deva, agni, pativrate, pati, kage, bayyi, kai, nalige, puje, mosa, chinte, dharma, karma, bangara, hengasu, kannu, jnana,
**Pravachana:** NA
**Explanation:** NA